1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 87/2021

ದಿನಾಂಕ ಃ 13.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಗಿದೆ.
ಸಿ. ಡಬ್ಲ್ಯೂ: 4 ಪಿ. ಡಬ್ಲ್ಯೂ:5

| | |
|---|---|
| ಸಾಕ್ಷಿದಾರರ ಹೆಸರು | ಮನು |
| ತಂದೆಯ ಹೆಸರು | ಪುಟ್ಟಸ್ವಾಮಿ |
| ವಯಸ್ಸು | 34 ವರ್ಷ |
| ಉದ್ಯೋಗ | ಚಾಲಕ |
| ವಾಸ | ಕೀಳಘಟ್ಟ ಗ್ರಾಮ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಫ್ರಾಸಾ.1, 2, 4 ರವರು ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು, ಅವರು ನಮ್ಮ ಗ್ರಾಮದವರು. ಆರೋಪಿತರು ವ್ಯವಸಾಯ ಮಾಡುತ್ತಾರೆ.
2. ಫ್ರಾಸಾ.1 ರವರ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಅವರು ಏನು ಬೆಳೆ ಬೆಳೆಯುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ಜಮೀನಿಗೆ ಏನು ನೀರಾವರಿ ವ್ಯವಸ್ಥೆ ಇದೆ ಎಂದು ನನಗೆ ಗೊತ್ತಿಲ್ಲ. ಆರೋಪಿತರು ವ್ಯವಸಾಯ ಮಾಡುತ್ತಾರೆ.
3. ಕೀಳಘಟ್ಟ ಗ್ರಾಮದಲ್ಲಿ ಸುತ್ತ ಮುತ್ತ ಕಲ್ಲು ಕೋರೆ ಇರುತ್ತದೆ. ಸದರಿ ಕಲ್ಲು ಕೋರೆಯನ್ನು ಯಾರು ನಡೆಸುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.
4. ಮುಮಾ.1 - ಬಾಟಲನ್ನು ನಾನು ನೋಡಿಲ್ಲ. ಆರೋಪಿತರ ವಿರುದ್ಧ ಏನು ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿತರ ವಿರುದ್ಧದ ಪ್ರಕರಣದಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

5. ದಿಃ 10.0.4.2019 ರಂದು ಬೆಳಗ್ಗೆ 8.00 ಗಂಟೆ ಸಮಯದಲ್ಲಿ ನಾನು, ಫ್ರಾಸಾ. ಫ್ರಾಸಾ. 4 ರವರ ಮನೆಯ ಬಳಿ ಹೋಗಿ ಅವರನ್ನು ಕರೆದುಕೊಂಡು ಮದ್ದೂರಿಗೆ ಹೋಗಿದ್ದೆ ಎಂದರೆ ಸರಿ. ಫ್ರಾಸಾ.1 ರವರ ಜಮೀನಿನ ಬಳಿ ನಾವು ಹೋಗುತ್ತಿದ್ದಾಗ, ಅಲ್ಲಿ ಗಲಾಟೆ ಆಗುತ್ತಿದ್ದುದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಫ್ರಾಸಾ.1 ರವರ ಜಮೀನು ಸರ್ವೆನಂಃ 72 ಹಾಗೂ ಪಕ್ಕದಲ್ಲಿ ಇರುವ ಕಲ್ಲಿನ ಕೋರೆ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಕಲ್ಲಿನ ಕೋರೆಯಿಂದ ಫ್ರಾಸಾ.1 ರವರ ಬೋರ್ ವೆಲ್ ಗೆ ಹಾಗೂ ಜಮೀನಿಗೆ ತೊಂದರೆಯಾಗುತ್ತಿದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ತಿಳಿಸಿದ್ದರೂ ಸಹ ಯಾವುದೇ ಪ್ರಯೋಜನ ಆಗಿಲ್ಲವೆಂದು, ಸದರಿ ಕಲ್ಲಿನ ಕೋರೆಗೆ ಹೋಗುತ್ತಿದ್ದ ವಾಹನಗಳನ್ನು ಫ್ರಾಸಾ.1 ಮತ್ತು ಅವರ ಮಕ್ಕಳು ತಡೆಯುತ್ತಿದ್ದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ.

6. ನಾನು ಹಾಗು ಫ್ರಾಸಾ. 4 ರವರು ಹೋಗುತ್ತಿದ್ದಾಗ ಆರೋಪಿತರು, ಫ್ರಾಸಾ. 2 ರವರಿಗೆ ಅವಾಚ್ಯವಾಗಿ ಬೋಳಿ ಮಗನೇ, ಸೂಳೆ ಮಗನೇ ಎಂದು ಬೈದು, ಸದರಿ ಆರೋಪಿತರ ಪೈಕಿ 3 ರಿಂದ 5, ಹಾಗೂ 7 ನೇ ಆರೋಪಿತರು ಫ್ರಾಸಾ. 2 ರವರನ್ನು ತಬ್ಬಿ ಹಿಡಿದುಕೊಂಡಿದ್ದನು ನಾವು ನೋಡಿದೆವು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯು, ಫ್ರಾಸಾ. 2 ರವರನ್ನು ಸಾಯಿಸುವ ಉದ್ದೇಶದಿಂದ ತನ್ನ ಕೈಯ್ಯಲ್ಲಿ ಇದ್ದ ಮುಮಾ.1 ಬಾಟಲಿನಿಂದ ವಿಷವನ್ನು ಫ್ರಾಸಾ.2 ರವರ ಬಾರಿಗೆ ಸುರಿದಿರುವುದನ್ನು ನೋಡಿದೆನು ಎಂದರೆ ಸರಿಯಲ್ಲ. ಫ್ರಾಸಾ. 2 ರವರು ಕಿರುಚಿಕೊಳ್ಳುತ್ತಿದ್ದಾಗ ನಾನು ಹಾಗೂ ಫ್ರಾಸಾ.4 ರವರು ಸಮಾಧಾನ ಮಾಡಿ ಕಳುಹಿಸಿದೆವು ಎಂದರೆ ಸರಿಯಲ್ಲ. ಆಗ ಫ್ರಾಸಾ.1 ರವರು ಸ್ಥಳಕ್ಕೆ ಬಂದು ಫ್ರಾಸಾ.2 ರವರನ್ನು ಉಪಚರಿಸಿದರು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯು ಮುಮಾ.1 ಬಾಟಲನ್ನು ಪಕ್ಕದ ಹೊಲದ ಕಡೆಗೆ ಬಿಸಾಡಿದರು ಹಾಗೂ ಅದನ್ನು ಫ್ರಾಸಾ. 1 ರವರು ಎತ್ತಿ ಇಟ್ಟಿಕೊಂಡರು ಎಂದರೆ

ನನಗೆ ಗೊತ್ತಿಲ್ಲ. ತಕ್ಷಣ ನಾನು ಹಾಗೂ ಪ್ರಾಸಾ. 4 ರವರು ಪ್ರಾಸಾ. 2 ರವರನ್ನು ಆಸ್ಪತ್ರೆಗೆ ದಾಖಲು ಮಾಡಿದೆವು ಎಂದರೆ ಸರಿಯಲ್ಲ. ಆರೋಪಿತರು ಸದರಿ ಪ್ರಾಸಾ.2 ರವರಿಗೆ, ಕಲ್ಲಿನ ಕೋರೆಗೆ ಅಡ್ಡಿ ಉಂಟು ಮಾಡುತ್ತಾರೆ ಎಂದು ವಿಷವನ್ನು ಸುರಿದು ಕೊಲೆ ಮಾಡಲು ಪ್ರಯತ್ನಿಸಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ.

7. ದಿಃ 12.04.2019 ರಂದು ನಾನು ಪೊಲೀಸರಿಗೆ ನಾನು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ ‘‘ ನಾನು ಮತ್ತು ಪುಟ್ಟಸ್ವಾಮಿ ಇಬ್ಬರೂ ............................................... ನನ್ನ ಹೇಳಿಕೆಯಾಗಿದೆ ’’ ಎಂಬ ಭಾಗವನ್ನು ಸಾಕ್ಷಿಗೆ ಅಭಿಯೋಜಕರು ಓದಿ ಹೇಳಿದ್ದು, ಸಾಕ್ಷಿಯು ಸದರಿ ಹೇಳಿಕೆಯ ಭಾಗವನ್ನು ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಪಿ.13 ಎಂದು ಗುರುತಿಸಲಾಯಿತು. ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿ ಅದರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರು ನಮ್ಮ ಊರಿನವರಾದ್ದರಿಂದ ಸಾಕ್ಷಿಯು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 1, 3 ರಿಂದ 7 ಆರೋಪಿತರ ಪರ ಶ್ರೀ ಜಿ ಎಂ ವಕೀಲರಿಂದ ಃ**

1, 3 ರಿಂದ 7 ಆರೋಪಿತರ ಪರ ಶ್ರೀ ಜಿ ಎಂ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

-

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.